**ಪಿ.ಡಬ್ಲೂ-1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 15-04-2025**

**ಪಾಟೀ ಸವಾಲುಃ ಶ್ರೀ ಆರ್ ಪಿ ಆರೋಪಿ ಪರ ವಕೀಲರಿಂದ:**

ನಾನು 9 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ರಿಯಲ್ ಎಸ್ಟೇಟ್ ವ್ಯವಹಾರವನ್ನು 20 ವರ್ಷಗಳಿಂದ ಮಾಡಿಕೊಂಡು ಬಂದಿರುತ್ತೇನೆ. ಆರೋಪಿಯ ಗಂಡನಾದ ನಾಗರಾಜ್ ರವರಿಂದ ಆರೋಪಿಯು ನನಗೆ ಪರಿಚಯ. ನಾಗರಾಜ್ ರವರು ನನಗೆ ಕಳೆದ 12 ವರ್ಷಗಳಿಂದ ಪರಿಚಯವಿರುತ್ತಾರೆ. ಈ ಪ್ರಕರಣದ ಆರೋಪಿಯು ನನಗೆ ಕಳೆದ 6-7 ವರ್ಷಗಳಿಂದ ಪರಿಚಯವಿರುತ್ತಾರೆ. ಈ ಪ್ರಕರಣದ ದಾಖಲಿಸಲು ನಾನೇ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಆರೋಪಿಗೆ ಒಬ್ಬನೇ ಮಗನಿರುತ್ತಾನೆ. ನಾನು ಆರೋಪಿಯ ಮನೆಗೆ ಹೋಗಿಬರುವುದನ್ನು ಮಾಡುತ್ತಿರಲಿಲ್ಲ. ಆರೋಪಿಯ ಮಗನು ಈಗ ಪದವಿಧರನಾಗಿದ್ದು ಕೆಲಸಕ್ಕೆ ಹೋಗುತ್ತಿದ್ದಾನೆ. ಆರೋಪಿಯ ಮಗನ ಪದವಿಯು ಯಾವ ವರ್ಷ ಮುಗಿದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಮಗನು 2020 ನೇ ಸಾಲಿನಲ್ಲಿ ಪದವಿ ಮುಗಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಯು ನನ್ನ ಬಳಿ ಹಣ ಕೇಳಿದಾಗ ಅವರ ಮಗನ ವಿದ್ಯಾಬ್ಯಾಸದ ಕುರಿತು ಮಾಹಿತಿ ತಿಳಿದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ರಿಯಲ್ ಎಸ್ಟೇಟ್ ಕಚೇರಿ ಹೊಂದಿರುವುದಿಲ್ಲ. ವಿಜಯಪುರದ ಮಾರ್ಕೇಟ್ ನ ಬಳಿ ನನ್ನ ಕಚೇರಿ ಇತ್ತು ಎಂದರೆ ಸರಿ. ನಾನು ಈಗ ಪಿರ್ಯಾದಿಯಲ್ಲಿ ತೋರಿಸಿದ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನ್ನದು ವಿಜಯಪುರ ಪಟ್ಟಣದ ಬಸವೇಶ್ವರ ನಗರದಲ್ಲಿ ಇನ್ನೊಂದು ಮನೆ ಇದೆ ಎಂದರೆ ಸರಿ.

2. ನನಗೆ ಮಂಜುಳಾ ಎನ್ನುವವರ ಪರಿಚಯವಿರುತ್ತದೆ, ಸಾಕ್ಷಿಯು ಮುಂದುವರೆದು ಅವರು ನನ್ನ ಹೆಂಡತಿ ಎಂದು ನುಡಿಯುತ್ತಾರೆ. ನನಗೆ ಇಬ್ಬರು ಹೆಂಡತಿಯರಿದ್ದು, ಮಂಜುಳಾರವರು ನನ್ನ ಮೊದಲನೆ ಹೆಂಡತಿಯಾಗಿರುತ್ತಾರೆ. ನನ್ನ ಎರಡನೇ ಹೆಂಡತಿ ಹೆಸರು ವೇದಾ. ನಾನು ಪಿರ್ಯಾದಿಯಲ್ಲಿ ತೋರಿಸಿದ ವಿಳಾಸದಲ್ಲಿ ನನ್ನ ಎರಡನೇ ಹೆಂಡತಿ ವೇದಾರವರೊಂದಿಗೆ ವಾಸವಾಗಿರುತ್ತೇನೆ ಎಂದರೆ ಸರಿ. ನನ್ನ ಎರಡನೇ ಹೆಂಡತಿಗೆ ಇಬ್ಬರು ಜನ ಮಕ್ಕಳು. ನನ್ನ ಮೊದಲನೆ ಹೆಂಡತಿಗೆ ಒಬ್ಬ ಗಂಡುಮಗನಿರುತ್ತಾನೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅವನು ನನ್ನ ಮಗನಲ್ಲ ಎಂದು ನುಡಿಯುತ್ತಾರೆ. ನಾನು ವಿಜಯಪುರದ ಮಾರ್ಕೆಟ್ ನಲ್ಲಿ ಹೊಂದಿರುವ ನನ್ನ ಕಚೇರಿಯ ಪಕ್ಕದಲ್ಲಿ ಸೌಂದರ್ಯ ಟೈಲರ್ಸ್ ಎನ್ನುವ ಅಂಗಡಿಯನ್ನು ನನ್ನ ಮೊದಲನೆ ಹೆಂಡತಿ ಹೊಂದಿದ್ದರು ಎಂದರೆ ಸರಿ.

3. ಈ ಪ್ರಕರಣದ ಆರೋಪಿಯು ನನ್ನ ಮೊದಲನೆ ಹೆಂಡತಿ ಮಂಜುಳಾರವರ ಟೈಲರ್ ಅಂಗಡಿಗೆ ಆಗಾಗ ಬಟ್ಟೆ ಹೊಲಿಸಲು ಹೋಗುತ್ತಿದ್ದರಿಂದ ಪರಿಚಯವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತೂ ಆರೋಪಿಗೆ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.10,00,000/- ಹಣವನ್ನು ನಗದು ಮೂಲಕ ನೀಡಿರುತ್ತೇನೆ. ನಾನು ಆರೋಪಿಗೆ

ನನ್ನ ಜಮೀನು ಮಾರಿ ಬಂದ ಹಣವನ್ನು ನೀಡಿರುತ್ತೇನೆ. ನಾನು ನನ್ನ ಜಮೀನನ್ನು 2015 ನೇ ಸಾಲಿನಲ್ಲಿ ಮಾರಾಟ ಮಾಡಿದ್ದು, 2023 ನೇ ಸಾಲಿನಲ್ಲಿ ಅದರ ಹಣ ನನಗೆ ಬಂದಿರುತ್ತದೆ. ನಾನು ಬೆಂಗಳೂರಿನ ಕೇಶವ ಮೂರ್ತಿ ಎನ್ನುವವರಿಗೆ ನನ್ನ ಆಸ್ತಿಯನ್ನು ಮಾರಾಟ ಮಾಡಿದ್ದು, ಆದರೆ ಅದರ ಸರ್ವೆ ನಂಬರ್ ನನಗೆ ಈಗ ನೆನಪಿಲ್ಲ. ಅದು ಒಟ್ಟು ವಿಸ್ತೀರ್ಣ 1 ಎಕರೆ 38 ಗುಂಟೆ ಇತ್ತು. ನಾನು ಸದರಿ ಆಸ್ತಿಯನ್ನು ಕೊಂಡಪ್ಪ ರವರಿಂದ ರೂ.5,00,000/-ಅಗ್ರಿಮೆಂಟ್ ಹಾಕಿಸಿಕೊಂಡಿರುತ್ತೇನೆ. ನಾನು ಮಾರಾಟದ ಒಟ್ಟು ಎಷ್ಟು ಮೊತ್ತಕ್ಕೆ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಸದರಿ ಕರಾರು ಪತ್ರವು ನೊಂದಣಿಯಾಗಿರುವುದಿಲ್ಲ.

4. ಆರೋಪಿ ನನಗೆ ನವೆಂಬರ್ ತಿಂಗಳ 2022 ನೇ ಸಾಲಿನಲ್ಲಿ ಹಣ ಕೇಳಿರುತ್ತಾರೆ. ಆರೋಪಿ ನನಗೆ 2022 ನೇ ಸಾಲಿನ ನವೆಂಬರ್ ತಿಂಗಳ ಮೊದಲನೆ ವಾರದಲ್ಲಿ ಹಣ ಕೇಳಿದ್ದು, ನಾನು ಆರೋಪಿಗೆ ದಿ.15-11-2022 ರಂದು ಹಣ ನೀಡಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ನನ್ನ ರಿಯಲ್ ಎಸ್ಟೇಟ್ ಕಚೇರಿಯನ್ನು ನೊಂದಣಿ ಮಾಡಿಸಿರುವುದಿಲ್ಲ. ನಾನು ನನ್ನ ಕಚೇರಿಯಲ್ಲಿ ಫೈನಾನ್ಸ್ ಮತ್ತು ಚೀಟಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ಈಗ 44 ವರ್ಷ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.